ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 6ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : " ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮಾನ್ಯ ಅಧ್ಯಕ್ಷರೇ, " 2004ರ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : " 2004ರ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಗೊಂದಲ

ಅಧ್ಯಕ್ಷರು : ಒಂದೆರಡು ನಿಮಿಷ ಇರಿ. ಆಮೇಲೆ ನೀವು ಎಷ್ಟು ಹೊತ್ತು ಬೇಕಾದರೂ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಸ್ವಲ್ಪ ಡಿಬೇಟ್ ಮಾಡಲಿಕ್ಕ ಇದೆ. ನಾವು ಈಗ ಎರಡು ಬಿಲ್‌ಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ.

ಅಧ್ಯಕ್ಷರು : ಎರಡು ನಿಮಿಷ ಇರಿ.

ಗೊಂದಲ

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಸಾರ್, ಇನ್ನೊಂದು ಸ್ಮಾಲ್ ಅಮೆಂಡ್‌ಮೆಂಟ್ ಇದೆ. ದಯಮಾಡಿ ಕೇಳಿ. ಒಂದೇ ಒಂದು ವರ್ಡ್ ಛೇಂಜ್ ಮಾಡುವುದು ಇದೆ.

ಅಧ್ಯಕ್ಷರು : ನಾಲ್ಕು ವರ್ಷ ನಾಲ್ಕು ತಿಂಗಳಿಂದ ಕೋಅಪರೇಟ್ ಮಾಡಿದ್ದೀರಿ. ಇನ್ನು ಎರಡು ನಿಮಿಷ ಕೋಆಪರೇಟ್ ಮಾಡಲಾರಿರಾ ? ಇನ್ನು ಎರಡೇ ನಿಮಿಷ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಸ್ಮಾಲ್ ಅಮೆಂಡ್‌ಮೆಂಟ್ ಇದೆ. ಸರ್ಕಾರದ ತಿದ್ದುಪಡಿಯಲ್ಲಿ ಸರ್ಕಾರಿ ವಲಯ ಎಂದು ಸೇರಿಸಬೇಕಾಗಿದೆ. ಅದು ಒಂದೇ ಸ್ಮಾಲ್ ಅಮೆಂಡ್‌ಮೆಂಟ್. ಸಾರ್ವಜನಿಕ ವಲಯ ಎಂಬುದರ ಬದಲು ಸರ್ಕಾರೀ ವಲಯ..ಎಂದು ಸೇರಿಸಬೇಕಾಗಿದೆ.

III) ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (2ನೇ ತಿದ್ದುಪಡಿ) ವಿಧೇಯಕ 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, " ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2004ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (2ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಅದರ ಡೀಟೇಲ್ಸ್ ಹೇಳಿ.

ಶ್ರೀ ಎ.ಕೃಷ್ಣಪ್ಪ : ' ಸಾರ್ವಜನಿಕ ವಲಯ ' ಎಂದು ಹೇಳಿ ಈಗ ಆಕ್ಟ್‌ನಲ್ಲಿ ಇದೆ. ಅದನ್ನು ' ಸರ್ಕಾರಿ ವಲಯ ' ಎಂದು ಮಾಡಿ ತಿದ್ದುಪಡಿ ತಂದಿದೆ ಅಷ್ಟೇ.

ಅಧ್ಯಕ್ಷರು : ಸಿಂಪಲ್ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಆ ಶಬ್ದ ಚೇಂಜ್ ಮಾಡಲಿಕ್ಕೆ ಕಾರಣವೇನು ಎಂಬುದನ್ನು ಕೇಳುತ್ತೇನೆ. ಬ್ಯಾಕ್‌ಗ್ರಾಂಡ್ ಏನು ಇದೆ ?

ಶ್ರೀ ಎ.ಕೃಷ್ಣಪ್ಪ : ' ಸಾರ್ವಜನಿಕ ವಲಯ ಎಂದು ಇದ್ದುದ್ದನ್ನು ' ಸರ್ಕಾರಿ ವಲಯ ' ಎಂದು ತಿದ್ದುಪಡಿ ಮಾಡಿರುವ ಉದ್ದೇಶವೇನೆಂದರೆ,ಸರ್ಕಾರದವರೇ ಅದನ್ನು ಚಲಾಯಿಸುವುದಕ್ಕೆ ಒಂದು ಅಧಿಕಾರವನ್ನು ಪಡೆಮಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು. ಪ್ರಸ್ತಾವ ಏನೆಂದರೆ :– " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (2ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಸ್ವಲ್ಪ ಜೋರಾಗಿ ಹೇಳಿ, ಚುನಾವಣೆ ಬರುತ್ತಿದೆ. ಅಲ್ಲಿ ಮಾತ್ರ ಜೋರಾಗಿ ಮಾತನಾಡುತ್ತೀರಿ, ಟಿವಿಗಳಲ್ಲಿ ಜೋರಾಗಿ ಮಾತನಾಡುತ್ತೀರಿ. ಇಲ್ಲಿ ಏಕೆ ಎಲ್ಲಾ ಸಪ್ಪೆ ಆಗಿದ್ದೀರಲ್ಲಾ. ಜೋರಾಗಿ ಕೂಗಿ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಯಾಲೋಚಿಸುವುದು

ಖಂಡ 2ರಿಂದ 4ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಖಂಡ 2ರಿಂದ 4ರವರಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: " ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, " ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 2004ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (2ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ. "

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (2ನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆ ಒಪ್ಪಿಗೆ ನೀಡಲಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದಂತಹ ಎರಡು ಮಸೂದೆಗಳು ಇದ್ದಾವೆ. ಅದರಲ್ಲಿ ಒಂದು ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಇರತಕ್ಕಂಥದ್ದು – 2004ನೇ ಸಾಲಿನ ಕರ್ನಾಟಕ ಹಣಕಾಸು ಸಂಸ್ಥೆಯ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ ಅದು ಇಲ್ಲಿ ಮಂಜೂರಾಗಿ ಹೋಗಿರತಕ್ಕದ್ದು. ಎರಡೂ ಸದನದಲ್ಲಿ ಒಪ್ಪಿಗೆ ಆಗಿರತಕ್ಕಂಥದ್ದು ರಾಷ್ಟ್ರಾಧ್ಯಕ್ಷರು ಅದನ್ನು ತಾಂತ್ರಿಕ ಕಾರಣಕ್ಕಾಗಿ ವಾಪಸ್ ಹಾಕಿದ್ದಾರೆ. ಆ ಮಸೂದೆ ನಾವು ಒಪ್ಪಿರತಕ್ಕಂಥ ಮಸೂದೆ; ಮಂಜೂರಾಗಿರತಕ್ಕಂಥದ್ದು. ಮಾನ್ಯ ಸುರೇಶ್ ಕುಮಾರ್ ಅವರೇ ಅದರ ಶಿಲ್ಪಿಗಳು. ನಾವು ಅದನ್ನು ಮಂಜೂರು ಮಾಡಿಕೊಟ್ಟಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಸಂಸ್ಥೆಯ ಶಿಲ್ಪಗಳಲ್ಲಿ, ಮಸೂದೆಯ ಶಿಲ್ಪಿಗಳು. ತಪ್ಪು ಅಭಿಪ್ರಾಯ ಬರಬಾರದು.

ಶ್ರೀ ಡಿ.ಬಿ.ಚಂದ್ರೇಗೌಡ : ಮಸೂದೆಯ ಶಿಲ್ಪಿಗಳು ಎಂದು ಹೇಳುತ್ತೇನೆ. ಪ್ರೆಸಿಡೆಂಟ್ ಆಫ್ ಇಂಡಿಯಾದಿಂದ ಟೆಕ್ನಿಕಲ್ ರೀಸನ್‌ಗೆ ವಾಪಸ್ ಬಂದಿದೆ. ಅದ್ದರಿಂದ ಇದನ್ನು ಒಂದು ತೆಗೆದುಕೊಳ್ಳಬೇಕು. ಎರಡನೆಯದಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಬಗ್ಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹೇಳುತ್ತಾರೆ. ಈ ಎರಡು ಮಸೂದೆಗಳನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಅವಕಾಶ ಆಗಬೇಕು.

ಇ) ವಿಧೇಯಕಗಳ ಮಂಡನೆ:

(1) ಕರ್ನಾಟಕ ಹಣಕಾಸು ಸಂಸ್ಥೆಗಳನ್ನು ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2004

ಮಂಡನೆಗೆ ಅನುಮತಿ ಕೋರಿಕೆ :

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–ಮಾನ್ಯ ಅಧ್ಯಕ್ಷರೆ, " 2004ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ. "

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: " 2004ರ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"